# Pilot project launched to double farmers' income

## Farmers to be guided on integrated farming methods in State

**KALABURAGI: Agriculture scientists should transfer all the technology to villages and support farmers for doubling their revenue, said State Agriculture Price Commission Chairman Prakash Kammaradi.**

He was speaking at a meeting with officials convened here at deputy commissioner's office on Friday to discuss about the measures to be taken to increase the revenue of farmers.

The Central government is aiming at doubling the income of farmers within next five years.

The State government too has agreed upon taking up various programmes in this regard. Tellur village in Aland taluk is one among the eight selected villages in the State for the implementation of such programmes. Benefits of 52 main schemes of the Centre and State should reach all the farmers. Officials should seriously work in this direction, he said.

Economic progress would be difficult if depended only on agriculture in the recent years. Along with agriculture, dairy farming, poultry, sheep rearing, sericulture, horticulture and plantation activities should be taken up.

Farmers could lead a peaceful life if they opted for sustainable farming methods, he said.

Agriculture, horticulture, forest, NABARD, Lead Bank, health, sericulture and veterinary officials should visit Tellur village regularly. Farmers should be explained about the schemes and available machineries for farming. The interest of farmers in various crops should be studied. Interactions should be held with farmers every Monday regarding the government schemes, he said.

Agriculture Department Joint Director Jilani Mokashi said, efforts would be made to increase the income of farmers at Tellur village, which has been selected for the pilot scheme. On every Monday, the village would be visited and farmers would be given necessary suggestions for increasing crop yield.

Additional Deputy Commissioner Bhimashankar Teggalli, Krishik Samaj president Sidramappa Patil Dhangapur and selected farmers from Tellur were present.

**DH News Service**

### Soil health tested

Agriculture Science Centre head Raju Teggalli has informed that Tellur village has 112 farmer families and sustainable agriculture methods would be taught to all of them. The soil heath and condition in the area was tested and separate cards would be issued to respective farmers to know the soil status.



Prakash Kammaradi

### Plantation

According to DCF B N Chavan, cultivation of Hebbevu (a variety of neem tree) is a better option for farmers in the plain land. On an average 300 saplings could be planted and grown in one acre land. They will be ready for cutting in 8-10 years. This will bring a good revenue for farmers.

ಕಲಬುರಗಿ: ರಾಮನಾಥ ಕೋವಿಂದ ಅವರು ಭಾರತದ ನೂತನ ರಾಷ್ಟ್ರಪತಿಯ
ಅಖಿಲ ಭಾರತ ಕೋಲಿ ಸಮಾಜ ಜಿಲ್ಲಾಧ್ಯಕ್ಷ ಶಾಂತಪ್ಪ ಕೂಡಿ ಹರ್ಷ ವ್ಯಕ್ತಪಡಿಸಿ
ವ್ಯಕ್ತಿಯೊಬ್ಬರು ಭಾರತದ ರಾಷ್ಟ್ರಪತಿ ಆಗಿರುವುದು ಇಡೀ ಕೋಲಿ ಸಮಾಜಕ್ಕೆ ಹರ್ಷ ತಂ
ಸಿಕ್ಕಂತಾಗಿದೆ ಎಂದು ಅವರು ಅ

### ಯೋಜನೆ ಅನುಷ್ಠಾನ ಕುರಿತು ಕೃಷಿ ಬೆಲೆ ಆಯೋಗ ಅಧ್ಯಕ್ಷ ಕಮ್ಮರಡಿ ನೇತೃತ್ವದಲ್ಲಿ ಸಭೆ

# 8 ಹಳ್ಳಿ ರೈತರ ಆರ್ಥಿಕತೆ ಸುಧಾರಣೆ

■ ವಿಜಯವಾಣಿ ಸುದ್ದಿಜಾಲ ಕಲಬುರಗಿ

ರೈತರ ಆದಾಯ ವೃದ್ಧಿ ಯೋಜನೆಯಡಿ ಆಳಂದ ತಾಲೂಕಿನ ತೆಲ್ಲೂರ ಸೇರಿ ರಾಜ್ಯದ 8 ಜಿಲ್ಲೆಗಳ ತಲಾ ಒಂದು ಗ್ರಾಮ ಆಯ್ಕೆ ಮಾಡಲಾಗಿದೆ ಎಂದು ಕರ್ನಾಟಕ ಕೃಷಿ ಬೆಲೆ ಆಯೋಗದ ಅಧ್ಯಕ್ಷ ಡಾ.ಟಿ.ಎನ್.ಪ್ರಕಾಶ ಕಮ್ಮರಡಿ ತಿಳಿಸಿದರು.

ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಶುಕ್ರವಾರ ತೆಲೂರಿನ ರೈತರು, ವಿವಿಧ ಇಲಾಖೆ ಅಧಿಕಾರಿಗಳ ಸಭೆಯಲ್ಲಿ ಅಧ್ಯಕ್ಷತೆ ವಹಿಸಿದ್ದ ಅವರು, ಗ್ರಾಮಗಳ ರೈತರ ಸದ್ಯದ ಮತ್ತು ಯೋಜನೆಗಳಿಂದ ಬದಲಾಗುವ ಆರ್ಥಿಕ ಪರಿಸ್ಥಿತಿ ಅವಲೋಕಿಸಿ 2018ರ ಬಜೆಟ್ ಪೂರ್ವ ಸರ್ಕಾರಕ್ಕೆ ನೀಲನಕ್ಷೆ ಸಲ್ಲಿಸಲಾಗುವುದು ಎಂದರು.

ರೈತರ ಶ್ರೇಯೋಭಿ ವೃದ್ಧಿಗೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು 52 ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುತ್ತಿದ್ದು, ಇದರ ಲಾಭ ತೆಲ್ಲೂರ ಫಲಾನುಭವಿಗಳಿಗೆ ತಲುಪಿಸುವ ಮೂಲಕ ಆರ್ಥಿಕ ಮಟ್ಟ ಹೆಚ್ಚಿಸಲು ಪ್ರಯತ್ನಿಸಲಾಗುವುದು. ಈ ನಿಟ್ಟಿನಲ್ಲಿ ಕೃಷಿಗೆ ಪೂರಕವಾಗಿರುವ ತೋಟಗಾರಿಕೆ, ಪಶು ಸಂಗೋಪನೆ, ಅರಣ್ಯ, ರೇಷ್ಮೆ ಹೀಗೆ ಎಲ್ಲ ಇಲಾಖೆ ಅಧಿಕಾರಿಗಳು ಹಾಗೂ ಕೃಷಿ ವಿಜ್ಞಾನ ಕೇಂದ್ರದವರು ಮುತುವರ್ಜಿಯಿಂದ ಕೆಲಸ ಮಾಡಬೇಕು ಎಂದು ಕಿವಿಮಾತು ಹೇಳಿದರು.

ಕೃಷಿ ಮಾರುಕಟ್ಟೆ ಇಲಾಖೆಯಿಂದ ತೊಗರಿ ಅಡಮಾನ ಸಾಲದ ವಿಶೇಷ ಅಭಿಯಾನ ಜಿಲ್ಲಾದ್ಯಂತ ಹಮ್ಮಿಕೊಂಡು ರೈತರಿಗೆ ಸೂಕ್ತ ತಿಳಿವಳಿಕೆ ನೀಡಬೇಕು. ತೆಲ್ಲೂರದಲ್ಲಿ ರೈತರ ಕೃಷಿ ಉತ್ಪನ್ನ ದಾಸ್ತಾನಿಗೆ 100 ಮೆಟ್ರಿಕ್ ಟನ್ ಸಾಮರ್ಥ್ಯದ ಉಗ್ರಾಣ, ರೈತರ ಕ್ಲಬ್‌ಗಳನ್ನು ಸರ್ಕಾರ ನಿರ್ಮಿಸಬೇಕು ಎಂದರು.

ತೊಗರಿ ಖರೀದಿ ಹಣ ಪಾವತಿಯಾಗಿಲ್ಲ. ಎಪಿಎಂಸಿಯಲ್ಲಿ ರೈತರಿಗೆ ವಂಚಿಸುತ್ತಿರುವ ಕುರಿತು ರೈತರು ಅಧ್ಯಕ್ಷರ ಗಮನಕ್ಕೆ ತಂದಾಗ, ಕೂಡಲೇ ಕ್ರಮ ಕೈಗೊಳ್ಳಿ ಎಂದು ಆದೇಶಿಸಿದರು.

ಜಿಲ್ಲಾ ಕೃಷಿಕ ಸಮಾಜ ಅಧ್ಯಕ್ಷ ಸಿದ್ರಾಮಪ್ಪ ಪಾಟೀಲ್ ಧಂಗಾಪುರ, ಹೆಚ್ಚುವರಿ ಡಿಸಿ ಭೀಮಾಶಂಕರ ತೆಗ್ಗಳ್ಳಿ, ಕೃಷಿ ಸಂಶೋಧನಾ ಕೇಂದ್ರ ಮುಖ್ಯಸ್ಥ ಡಾ.ಡಿ.ಎಂ.ಮಣ್ಣೂರ, ಸಂಯೋಜನಾಧಿಕಾರಿ ಡಾ.ರಾಜು ತೆಗ್ಗಳ್ಳಿ, ಸಾಮಾಜಿಕ ಮತ್ತು ಆರ್ಥಿಕ ಬದಲಾವಣೆ ಸಂಸ್ಥೆ ಸಲಹೆಗಾರ ಡಾ.ವಿ.ರಾಮಸ್ವಾಮಿ, ಜಂಟಿ ಕೃಷಿ ನಿರ್ದೇಶಕ ಜಿಲಾನಿ ಮೊಕಾಶಿ ಇತರರಿದ್ದರು.

> ತೆಲ್ಲೂರ ಋಣಮುಕ್ತ ಗ್ರಾಮವನ್ನಾಗಿಸುವ ನಿಟ್ಟಿನಲ್ಲಿ ಸಾಲ ಯೋಜನೆ ರೂಪಿಸಬೇಕು. ನಬಾರ್ಡ್‌ನಿಂದ ರೈತರ ಕ್ಲಬ್ ಪ್ರಾರಂಭಿಸಬೇಕು. ರೈತರ ಆದಾಯ ಹೆಚ್ಚಳಕ್ಕೆ ಅನುವಾಗಲಿರುವ ಎಲ್ಲ ಸೌಲಭ್ಯ ಕಲ್ಪಿಸಲು ಎಲ್ಲ ಇಲಾಖೆ ಅಧಿಕಾರಿಗಳು ಶ್ರಮಿಸಬೇಕು.
>
> । ಡಾ.ಟಿ.ಎನ್.ಪ್ರಕಾಶ ಕಮ್ಮರಡಿ
> ಅಧ್ಯಕ್ಷರು, ಕರ್ನಾಟಕ ಕೃಷಿ ಬೆಲೆ ಆಯೋಗ



ಕಲಬುರಗಿಯಲ್ಲಿ ನಡೆದ ರೈತರ ಸಭೆಯಲ್ಲಿ ಕೃಷಿ ಬೆಲೆ ಆಯೋಗದ ಅಧ್ಯಕ್ಷ ಡಾ.ಟಿ.ಎನ್.ಪ್ರಕಾಶ ಕಮ್ಮರಡಿ, ಅಪರ ಡಿಸಿ ಭೀಮಾಶಂಕರ ತೆಗ್ಗಳ್ಳಿ, ಕೃಷಿ ಸಮಾಜ ಅಧ್ಯಕ್ಷ ಸಿದ್ರಾಮಪ್ಪ ಪಾಟೀಲ್ ಧಂಗಾಪುರ ಇತರರಿದ್ದರು.

## ಜಿಲ್ಲಾಧಿಕಾರಿ ಮೇಲುಸ್ತುವಾರಿ

ರೈತರ ಆದಾಯ ವೃದ್ಧಿ ಯೋಜನೆಯಡಿ ಆಯ್ಕೆಯಾಗಿರುವ ತೆಲ್ಲೂರದಲ್ಲಿ 112 ಕುಟುಂಬಗಳಿದ್ದು, ಎಲ್ಲರ ಹೊಲದ ಮಣ್ಣು ಮತ್ತು ರೈತರ ಆರೋಗ್ಯ ತಪಾಸಣೆ ಮಾಡಿ ಆರೋಗ್ಯ ಚೀಟಿ ನೀಡಲಾಗಿದ್ದು, ಜಿಲ್ಲಾಧಿಕಾರಿ ಮೇಲುಸ್ತುವಾರಿಯಲ್ಲಿ ಕಾರ್ಯಾನುಷ್ಠಾನ ನಡೆಯಲಿದೆ. ಜಂಟಿ ಕೃಷಿ ನಿರ್ದೇಶಕರು ಹಾಗೂ ಕೆವಿಕೆ ಸಂಯೋಜನಾಧಿಕಾರಿ ಮೇಲ್ವಿಚಾರಣೆ ಮಾಡುವರು ಎಂದು ಡಾ.ಕಮ್ಮರಡಿ ತಿಳಿಸಿದರು. ಪ್ರತಿ ರೈತರ ಡಾಟಾ ಬೇಸ್ ಕಡತ ತಯಾರಿಸಿ, ಅವರ ಆದಾಯ ಹೆಚ್ಚಳಕ್ಕೆ ಬೇಕಾಗುವ ವಿವಿಧ ಸೌಲಭ್ಯಗಳ ಸಮಗ್ರ ನೀಲನಕ್ಷೆ ತಯಾರಿಸಲಾಗುವುದು. ಜಿಲ್ಲಾ ಮಟ್ಟದ ಅಧಿಕಾರಿಗಳು ಪ್ರತಿ ತಿಂಗಳ ಮೊದಲ ಸೋಮವಾರ ಆ ಗ್ರಾಮಕ್ಕೆ ಭೇಟಿ ನೀಡಿ ರೈತರಿಗೆ ಕೃಷಿ ಸಂಬಂಧಿತ ಯೋಜನೆಗಳ ಮಾಹಿತಿ ನೀಡಬೇಕು ಎಂದು ಸಲಹೆ ನೀಡಿದರು.

## ಪ್ರಾಯೋಗಿಕ ಯೋಜನೆಗೆ ಜಿಲ್ಲೆಯ ಆಳಂದ ತಾಲ್ಲೂಕಿನ ತೆಲ್ಲೂರ ಗ್ರಾಮ ಆಯ್ಕೆ

# ರೈತರ ಆದಾಯ ದ್ವಿಗುಣಕ್ಕೆ ಕ್ರಮ: ಕಮ್ಮರಡಿ

ಕಲಬುರ್ಗಿ: 'ಕೃಷಿ ವಿಜ್ಞಾನಿಗಳು ಎಲ್ಲ ತಂತ್ರಜ್ಞಾನಗಳನ್ನು ಹಳ್ಳಿಗಳಿಗೆ ವರ್ಗಾಯಿಸಬೇಕು. ಆ ಮೂಲಕ ರೈತರ ಆದಾಯ ದ್ವಿಗುಣಕ್ಕೆ ಕ್ರಮಕೈಗೊಳ್ಳಬೇಕು' ಎಂದು ರಾಜ್ಯ ಕೃಷಿ ಬೆಲೆ ಆಯೋಗದ ಅಧ್ಯಕ್ಷ ಡಾ. ಪ್ರಕಾಶ್ ಕಮ್ಮರಡಿ ಹೇಳಿದರು.

ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಶುಕ್ರವಾರ 'ರೈತರ ಆದಾಯ ದ್ವಿಗುಣ' ಪ್ರಾಯೋಗಿಕ ಯೋಜನೆಗೆ ಸಂಬಂಧಿಸಿದಂತೆ ಅಧಿಕಾರಿಗಳ ಸಭೆಯಲ್ಲಿ ಮಾತನಾಡಿದರು.

'ಮುಂದಿನ ಐದು ವರ್ಷಗಳಲ್ಲಿ ರೈತರ ಆದಾಯ ದ್ವಿಗುಣಗೊಳಿಸುವುದು ಕೇಂದ್ರ ಸರ್ಕಾರದ ಪ್ರಮುಖ ಉದ್ದೇಶವಾಗಿದೆ. ಇದಕ್ಕೆ ರಾಜ್ಯ ಸರ್ಕಾರ ಕೂಡ ಒಪ್ಪಿಗೆ ಸೂಚಿಸಿದ್ದು, ಆಳಂದ ತಾಲ್ಲೂಕು ತೆಲ್ಲೂರ ಗ್ರಾಮವನ್ನು ಈ ಯೋಜನೆಯಡಿ ಆಯ್ಕೆ ಮಾಡಿಕೊಳ್ಳಲಾಗಿದೆ. ಕೇಂದ್ರ ಮತ್ತು ರಾಜ್ಯ ಸರ್ಕಾರ ಜಾರಿಗೆ ತಂದಿರುವ 52 ಪ್ರಮುಖ ಯೋಜನೆಗಳ ಲಾಭವನ್ನು ರೈತರಿಗೆ ತಲುಪಿಸಬೇಕು. ಆ ಮೂಲಕ ರೈತರಿಗೆ ನೆಮ್ಮದಿಯ ಬದುಕು ಕಲ್ಪಿಸಲು ಅಧಿಕಾರಿಗಳು ಮುಂದಾಗಬೇಕು' ಎಂದು ಸೂಚಿಸಿದರು.

'ಬರೀ ಕೃಷಿಯನ್ನೇ ನಂಬಿಕೊಂಡರೆ ಆರ್ಥಿಕ ಅಭಿವೃದ್ಧಿ ಕಷ್ಟ. ಕೃಷಿ ಜತೆಗೆ ಹೈನುಗಾರಿಕೆ, ಕೋಳಿ, ಕುರಿ ಸಾಕಾಣಿಕೆ, ರೇಷ್ಮೆ, ತೋಟಗಾರಿಕೆ ಮತ್ತು ಸಸಿಗಳನ್ನು ಬೆಳೆಸಲು ರೈತರು ಮುಂದಾಗಬೇಕು. ಸಮಗ್ರ ಕೃಷಿ ಕೈಗೊಂಡಲ್ಲಿ ಮಾತ್ರ ಋಣಮುಕ್ತರಾಗಿ ಬದುಕಲು ಸಾಧ್ಯ' ಎಂದು ಹೇಳಿದರು.

'ಕೃಷಿ, ತೋಟಗಾರಿಕೆ, ಅರಣ್ಯ, ನಬಾರ್ಡ್, ಲೀಡ್ ಬ್ಯಾಂಕ್, ಆರೋಗ್ಯ, ರೇಷ್ಮೆ, ಪಶು ಸಂಗೋಪನೆ ಇಲಾಖೆಗಳ ಅಧಿಕಾರಿಗಳು ತೆಲ್ಲೂರ ಗ್ರಾಮಕ್ಕೆ ಭೇಟಿ ನೀಡಬೇಕು. ರೈತರ ಆದಾಯ ವೃದ್ಧಿಗೆ ಯಾವ ಯಾವ ಯೋಜನೆಗಳು, ಯಂತ್ರೋಪಕರಣಗಳನ್ನು ಅವರಿಗೆ ಒದಗಿಸಬೇಕು, ಯಾವ ಬೆಳೆಗಳನ್ನು ಬೆಳೆಯಲು ರೈತರು ಉತ್ಸುಕರಾಗಿದ್ದಾರೆ ಎಂಬುದನ್ನು ತಿಳಿದುಕೊಳ್ಳಬೇಕು. ಪ್ರತಿ ಸೋಮವಾರ ಈ ಗ್ರಾಮಕ್ಕೆ ಭೇಟಿ ನೀಡಿ ಇಲಾಖೆಯಲ್ಲಿ ಲಭ್ಯವಿರುವ ಯೋಜನೆಗಳಿಗೆ ಸಂಬಂಧಿಸಿದಂತೆ ರೈತರೊಂದಿಗೆ ಸಂವಾದ ನಡೆಸಬೇಕು' ಎಂದು ಸಲಹೆ ನೀಡಿದರು.

### ಮುಖ್ಯಾಂಶಗಳು

- ರೈತರ ಕಲ್ಯಾಣಕ್ಕೆ 52 ಯೋಜನೆ
- ಗೋದಾಮು ನಿರ್ಮಾಣಕ್ಕೆ ಕ್ರಮ
- ಸಾಲ ನೀಡಲು ಸೂಚನೆ

ರೈತರ ಆದಾಯ ವೃದ್ಧಿಗಾಗಿ ಆಳಂದ ತಾಲ್ಲೂಕಿನ ತೆಲ್ಲೂರ ಸೇರಿದಂತೆ ರಾಜ್ಯದ ಎಂಟು ಜಿಲ್ಲೆಗಳ ಎಂಟು ಗ್ರಾಮಗಳನ್ನು ಪ್ರಾಯೋಗಿಕ ಆಯ್ಕೆ ಮಾಡಿಕೊಳ್ಳಲಾಗಿದೆ.

**ಡಾ. ಪ್ರಕಾಶ್ ಕಮ್ಮರಡಿ**

ಅಧ್ಯಕ್ಷ, ರಾಜ್ಯ ಕೃಷಿ ಬೆಲೆ ಆಯೋಗ



ಕಲಬುರ್ಗಿಯ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಶುಕ್ರವಾರ ಏರ್ಪಡಿಸಿದ್ದ ಅಧಿಕಾರಿಗಳ ಸಭೆಯಲ್ಲಿ ರಾಜ್ಯ ಕೃಷಿ ಬೆಲೆ ಆಯೋಗದ ಅಧ್ಯಕ್ಷ ಡಾ. ಪ್ರಕಾಶ್ ಕಮ್ಮರಡಿ ಮಾತನಾಡಿದರು

### ಮಣ್ಣು, ರೈತರ ಆರೋಗ್ಯ ತಪಾಸಣೆ

'ತೆಲ್ಲೂರ ಗ್ರಾಮದಲ್ಲಿ 112 ಕುಟುಂಬಗಳಿದ್ದು, ಎಲ್ಲರಿಗೂ ಸಮಗ್ರ ಕೃಷಿ ಬಗ್ಗೆ ಪರಿಚಯಿಸಲಾಗುವುದು. ಅಲ್ಲಿನ ರೈತರ ಮಣ್ಣು ಮತ್ತು ರೈತರ ಆರೋಗ್ಯ ಪರೀಕ್ಷೆ ಮಾಡಲಾಗಿದ್ದು, ಎರಡು ಪ್ರತ್ಯೇಕ ಕಾರ್ಡ್‌ಗಳನ್ನು ವಿತರಿಸಲಾಗುತ್ತಿದೆ. ರೈತರ ರಕ್ತದಲ್ಲಿ ಕೀಟನಾಶಕಗಳ ಪ್ರಮಾಣ ಎಷ್ಟಿದೆ ಎಂಬುದನ್ನು ಪರೀಕ್ಷಿಸಲಾಗಿದೆ' ಎಂದು ಕೃಷಿ ವಿಜ್ಞಾನ ಕೇಂದ್ರದ ಮುಖ್ಯಸ್ಥ ಡಾ. ರಾಜು ತೆಗ್ಗಳ್ಳಿ ತಿಳಿಸಿದರು.

### ಹೆಬ್ಬೇವು ಬೆಳೆಯಿರಿ

'ಬಯಲು ಸೀಮೆ ರೈತರು ಹೆಬ್ಬೇವು ಬೆಳೆಯುವುದು ಸೂಕ್ತ. ಒಂದು ಎಕರೆಯಲ್ಲಿ ಸರಾಸರಿ 300 ಗಿಡಗಳನ್ನು ಬೆಳೆಯಬಹುದು. 8-10 ವರ್ಷಗಳ ಬಳಿಕ ಈ ಮರಗಳು ಕಟಾವಿಗೆ ಸಿದ್ಧವಾಗುತ್ತವೆ. ಆ ಬಳಿಕ ಉತ್ತಮ ಆದಾಯ ಗಳಿಸಬಹುದಾಗಿದೆ' ಎಂದು ಅರಣ್ಯ ಇಲಾಖೆ ಡಿಸಿಎಫ್ ಬಿ.ಎನ್.ಚವಾಣ್ ಹೇಳಿದರು.

ಕೃಷಿ ಇಲಾಖೆ ಜಂಟಿ ನಿರ್ದೇಶಕ ಜಿಲಾನಿ ಮೊಕಾಶಿ ಮಾತನಾಡಿ, 'ತೆಲ್ಲೂರ ಗ್ರಾಮದ ರೈತರ ಆದಾಯ ದ್ವಿಗುಣಕ್ಕೆ ಸಂಬಂಧಿಸಿದಂತೆ ಸರ್ಕಾರದ ಎಲ್ಲ ಇಲಾಖೆಗಳೊಂದಿಗೆ ಸಮನ್ವಯತೆಯಿಂದ ಕೆಲಸ ಮಾಡಲಾಗುವುದು. ಪ್ರತಿ ಸೋಮವಾರ ಗ್ರಾಮಕ್ಕೆ ಭೇಟಿ ನೀಡಿ ರೈತರಿಗೆ ಬೇಕಾದ ಅಗತ್ಯ ಸಲಹೆ ನೀಡಲಾಗುವುದು' ಎಂದರು.

ಹೆಚ್ಚುವರಿ ಜಿಲ್ಲಾಧಿಕಾರಿ ಭೀಮಾಶಂಕರ ತೆಗ್ಗಳ್ಳಿ, ಕೃಷಿಕ ಸಮಾಜದ ಅಧ್ಯಕ್ಷ ಸಿದ್ರಾಮಪ್ಪ ಪಾಟೀಲ ಧಂಗಾಪುರ, ತೆಲ್ಲೂರ ಗ್ರಾಮದ 25 ರೈತರು ಇದ್ದರು.

# ತೆಲ್ಲೂರು ರೈತರಿಗೆ ಆದಾಯ ದ್ವಿಗುಣ ಭಾಗ್ಯ

**ಕೃಷಿ ಬೆಲೆ ಆಯೋಗ ಅಧ್ಯಕ್ಷರ ಸಭೆ** | **ಪ್ರತಿ ಸೋಮವಾರ ತೆಲ್ಲೂರಿನಲ್ಲಿ ಅಧಿಕಾರಿಗಳ ಸಭೆ** | **ರೈತರಿಗೆ ಸರಕಾರಿ ಯೋಜನೆ ತಲುಪಿಸುವ ವಿನೂತನ ಕ್ರಮ**

■ ವಿಕ ಸುದ್ದಿಲೋಕ ಕಲಬುರಗಿ

ಹೈನುಗಾರಿಕೆ, ಮೀನುಗಾರಿಕೆ, ಅರಣ್ಯ ಕೃಷಿ, ರೇಷ್ಮೆ ಸೇರಿದಂತೆ ಕೃಷಿ ಸಂಬಂಧಿ ತಂತ್ರಜ್ಞಾನ ಬಳಸಿಕೊಳ್ಳಲು ಅನುವಾಗುವಂತೆ ಆಳಂದ ತಾಲೂಕಿನ ತೆಲ್ಲೂರ ಗ್ರಾಮದಲ್ಲಿ ಪ್ರತಿ ಸೋಮವಾರ ಸಭೆ ನಡೆಸಬೇಕು. ಆ ಮೂಲಕ ಗ್ರಾಮದ ರೈತರ ಆದಾಯ ದ್ವಿಗುಣಗೊಳಿಸಲು ಕ್ರಮಕೈಗೊಳ್ಳಬೇಕೆಂದು ಕರ್ನಾಟಕ ಕೃಷಿ ಬೆಲೆ ಆಯೋಗದ ಅಧ್ಯಕ್ಷ ಡಾ.ಟಿ.ಎನ್. ಪ್ರಕಾಶ ಕಮ್ಮರಡ್ಡಿ ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಶುಕ್ರವಾರ ಕೃಷಿ ಇಲಾಖೆಯೊಂದಿಗೆ ಸಮನ್ವಯತೆ ಹೊಂದಿರುವ ವಿವಿಧ ಇಲಾಖಾ ಅಧಿಕಾರಿಗಳ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ರೈತರಿಗೆ ಸಮಗ್ರ ಕೃಷಿಯ ಮಹತ್ವ ತಿಳಿಸುವುದರ ಜೊತೆಗೆ ಮುಂದಿನ ಐದು ವರ್ಷಗಳಲ್ಲಿ ರೈತರ ಆದಾಯ ದ್ವಿಗುಣಗೊಳಿಸುವ ಕೇಂದ್ರ ಸರಕಾರದ ಮಹತ್ವಾಕಾಂಕ್ಷೆ ಮತ್ತು ರಾಜ್ಯ ಸರಕಾರದ ಅನುಮೋದನೆ ಪ್ರಕಾರ ರಾಜ್ಯದ 8 ಜಿಲ್ಲೆಗಳ ಎಂಟು ಗ್ರಾಮಗಳನ್ನು ಆಯ್ಕೆ ಮಾಡಿಕೊಳ್ಳಲಾಗಿದೆ. ಈ ಪೈಕಿ ಕಲಬುರಗಿ ಜಿಲ್ಲೆಯ ಆಳಂದ ತಾಲೂಕಿನ ತೆಲ್ಲೂರು ಗ್ರಾಮ ಆಯ್ಕೆಯಾಗಿದೆ. ಈ ಗ್ರಾಮಕ್ಕೆ ಕೃಷಿ ಮತ್ತು ಇತರ ಇಲಾಖೆಗಳ ಸುಮಾರು 52ಕ್ಕೂ ಅಧಿಕ ಸರಕಾರಿ ಕಾರ್ಯಕ್ರಮಗಳು ತಲುಪಬೇಕು. ಆ ಮೂಲಕ ಒಂದು ಗ್ರಾಮದ ರೈತರು ಎಷ್ಟು ಪ್ರಾಮಾಣಿಕತೆಯಿಂದ ತಮ್ಮ ಕೃಷಿ ಆದಾಯವನ್ನು ದ್ವಿಗುಣಗೊಳಿಸಿಕೊಳ್ಳಲು ಸಾಧ್ಯವಿದೆ ಎಂಬುದನ್ನು ಸಾಬೀತುಪಡಿಸುವ ಯತ್ನ ಇದಾಗಿದೆ. ಈ ಯತ್ನದ ನೀಲನಕ್ಷೆ ಸಿದ್ಧಪಡಿಸಿ ಇಡೀ ದೇಶಕ್ಕೆ ಇದರ ಯಶೋಗಾಥೆ ತಿಳಿಸುವ ಕೆಲಸ ಮಾಡುವ ಉದ್ದೇಶ ಕೇಂದ್ರ ಮತ್ತು ರಾಜ್ಯ ಸರಕಾರ ಇಟ್ಟುಕೊಂಡಿವೆ ಎಂದರು.

ರೈತರು ಆರೋಗ್ಯವಿದ್ದರೆ ಮಾತ್ರ ಕೃಷಿ ಚಟುವಟಿಕೆ ಆರೋಗ್ಯದಾಯಕವಾಗಿ ನಡೆಯಲು ಸಾಧ್ಯ. ಈ ಹಿನ್ನೆಲೆಯಲ್ಲಿ ಕೃಷಿ ವಿಜ್ಞಾನ ಕೇಂದ್ರದ ವಿಜ್ಞಾನಿಗಳು ಈಗಾಗಲೇ ತೆಲ್ಲೂರ ಗ್ರಾಮದ ಎಲ್ಲ ರೈತರ ಹೊಲಗಳಲ್ಲಿ ಮಣ್ಣು ಸಂಗ್ರಹಿಸಿ ಅದರ ಪರೀಕ್ಷೆಗೆ ಕಳುಹಿಸಿಕೊಟ್ಟಿದ್ದಾರೆ. ಇನ್ನೊಂದೆಡೆ, ಜಿಲ್ಲಾ ಆರೋಗ್ಯಾಧಿಕಾರಿಗಳ ನೇತೃತ್ವದಲ್ಲಿ ವೈದ್ಯರು ಗ್ರಾಮಕ್ಕೆ ಭೇಟಿ ಕೊಟ್ಟು ರೈತರು ಮತ್ತು ಅವರ ಕುಟುಂಬದವರ ರಕ್ತ ಪರೀಕ್ಷೆ ಕೈಗೊಳ್ಳಬೇಕು. ಆ ಮೂಲಕ ಇದುವರೆಗೆ ಕ್ರಿಮಿನಾಶಕಗಳನ್ನು ಬಳಸಿದ ಕಾರಣಕ್ಕಾಗಿ ಅದರ ಅಡ್ಡ ಪರಿಣಾಮದ ಅಂಶಗಳು ಏನಾದರೂ ರಕ್ತದಲ್ಲಿ ಇದೆಯೇ ಎಂಬುದನ್ನು ಪತ್ತೆ ಹಚ್ಚಲಿದ್ದಾರೆ. ಈ ಪ್ರಕ್ರಿಯೆ ಪೂರ್ಣಗೊಂಡ ಬಳಿಕ ರೈತರಿಗೆ ಮಣ್ಣಿನ ಆರೋಗ್ಯದ ಕಾರ್ಡ್ ಮತ್ತು ರೈತರ ಆರೋಗ್ಯ ಕಾರ್ಡ್ ನೀಡಲಾಗುತ್ತದೆ. ಇದು ಇಡೀ ದೇಶದಲ್ಲಿಯೇ ಅತ್ಯಂತ ಮಹತ್ವದ ಕಾರ್ಯಯೋಜನೆ ಎಂದರು.

ಸಭೆಯಲ್ಲಿ ಉಪಸ್ಥಿತರಿದ್ದ ಹಿರಿಯ ಕೃಷಿ ವಿಜ್ಞಾನಿ ಡಾ.ರಾಜು ತೆಗ್ಗಳ್ಳಿ ಮಾತನಾಡಿ, ತೆಲ್ಲೂರಿನಲ್ಲಿ ರೈತರಿಗೆ ಅಗತ್ಯ ಇರುವ ಕೃಷಿ ಪರಿಕರಗಳ ಜೊತೆಗೆ ಅವರಿಗೆ ಬೇಕಿರುವ ಕೃಷಿ ತಂತ್ರಜ್ಞಾನ ಅರಿವು ಮತ್ತು ಅದಕ್ಕೆ ಬೇಕಾದ ಪರಿಕರಗಳ ಸಮೀಕ್ಷೆ ಕೈಗೊಳ್ಳಲಾಗುವುದು ಎಂದರು. ಒಂದೊಮ್ಮೆ ಈ ಸಮೀಕ್ಷೆ ಪೂರ್ಣಗೊಂಡ ನಂತರ ಕೃಷಿ ಇಲಾಖೆ ವತಿಯಿಂದ ಗ್ರಾಮದ ಎಲ್ಲ ರೈತರಿಗೆ ಅಗತ್ಯ ಕೃಷಿ ಪರಿಕರಗಳನ್ನು ನೀಡಲಾಗುವುದು ಎಂದು ಘೋಷಿಸಿದರು.

ಈಗಾಗಲೇ ಕೃಷಿ ಇಲಾಖೆ ವತಿಯಿಂದ ಫಲಾನುಭವಿ ರೈತರ ಹೊಲಗಳನ್ನು ಹದ ಮಾಡಿಕೊಡುವುದು, ಕೃಷಿ ಉಪಕರಣಗಳನ್ನು ಒದಗಿಸುವುದು, ಮಣ್ಣಿಗೆ ಲಘು ಪೋಷಕಾಂಶ ಒದಗಿಸುವುದು ಹಾಗೂ ಉಚಿತವಾಗಿ ಬೀಜ ನೀಡಲಾಗುತ್ತಿದೆ. ಇದೀಗ ತೆಲ್ಲೂರ ಗ್ರಾಮ ವಿಶೇಷ ಯೋಜನೆ ಅಡಿ ಆಯ್ಕೆಗೊಂಡಿರುವ ಕಾರಣಕ್ಕಾಗಿ ಈ ಎಲ್ಲ ಸವಲತ್ತುಗಳನ್ನು ಶೇ.100ರಷ್ಟು ಒದಗಿಸಲಾಗುವುದು ಎಂದು ಜಿಲಾನಿ ಮೊಕಾಶಿ ಭರವಸೆ ನೀಡಿದರು.

ಅಪರ ಜಿಲ್ಲಾಧಿಕಾರಿ ಭೀಮಾಶಂಕರ ತೆಗ್ಗೆಳ್ಳಿ ವೇದಿಕೆಯಲ್ಲಿದ್ದರು. ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಶಿವರಾಜ ಸಜ್ಜನಶೆಟ್ಟಿ, ಜಿಲ್ಲಾ ಕೃಷಿಕ ಸಮಾಜದ ಅಧ್ಯಕ್ಷ ಸಿದ್ರಾಮಪ್ಪ ಪಾಟೀಲ ಧಂಗಾಪುರ, ಹೆಚ್ಚುವರಿ ಜಿಲ್ಲಾಧಿಕಾರಿ ಭೀಮಾಶಂಕರ ತೆಗ್ಗೆಳ್ಳಿ, ಕೃಷಿ ಸಂಶೋಧನಾ ಕೇಂದ್ರದ ಮುಖ್ಯಸ್ಥ ಡಾ.ಡಿ.ಎಂ.ಮಣ್ಣೂರ, ಕೃಷಿ ವಿಜ್ಞಾನ ಕೇಂದ್ರದ ಕಾರ್ಯಕ್ರಮ ಸಂಯೋಜನಾಧಿಕಾರಿ ಡಾ. ರಾಜು ತೆಗ್ಗಳ್ಳಿ, ಸಾಮಾಜಿಕ ಮತ್ತು ಆರ್ಥಿಕ ಬದಲಾವಣೆ ಸಂಸ್ಥೆಯ ಸಂಚಾಲಕ ಡಾ. ಎ. ರಾಮಸ್ವಾಮಿ ಸೇರಿದಂತೆ ತೆಲ್ಲೂರ ಗ್ರಾಮದ 25 ರೈತ ಪ್ರತಿನಿಧಿಗಳು ಪಾಲ್ಗೊಂಡಿದ್ದರು.



ರೈತರ ಆದಾಯ ದ್ವಿಗುಣಗೊಳಿಸುವ ಕೇಂದ್ರ ಮತ್ತು ರಾಜ್ಯ ಸರಕಾರದ ಆಶಯದನ್ವಯ ಆಯ್ಕೆಗೊಂಡಿರುವ ತೆಲ್ಲೂರ ರೈತರು ಹಾಗೂ ಅಧಿಕಾರಿಗಳ ಜೊತೆಗೆ ಕಲಬುರಗಿಯ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಶುಕ್ರವಾರ ನಡೆದ ಸಭೆಯಲ್ಲಿ ಕೃಷಿ ಬೆಲೆ ಆಯೋಗ ಅಧ್ಯಕ್ಷ ಪ್ರಕಾಶ್ ಕಮ್ಮರಡ್ಡಿ ಮಾತನಾಡಿದರು. ಪ್ರಭಾರಿ ಜಿಲ್ಲಾಧಿಕಾರಿ ಭೀಮಾಶಂಕರ ತೆಗ್ಗೆಳ್ಳಿ ಇದ್ದರು.

## ಪ್ರಮುಖ ಅಂಶಗಳು

- ಈ ಪ್ರಾಯೋಗಿಕ ಯೋಜನೆಯನ್ನಾಧರಿಸಿ 2018ನೇ ಸಾಲಿನ ಬಜೆಟ್ ಪೂರ್ವದಲ್ಲಿಯೇ ಆಯೋಗ ಸರಕಾರಕ್ಕೆ ಸಂಪೂರ್ಣ ನೀಲನಕ್ಷೆ ಸಲ್ಲಿಸಲಿದೆ.
- ಕಾರ್ಯಕ್ರಮ ಯಶಸ್ವಿಯಾದಲ್ಲಿ ರಾಜ್ಯದ ಎಲ್ಲ ಜಿಲ್ಲೆಗಳಿಗೂ ವಿಸ್ತರಿಸುವ ಚಿಂತನೆ
- ಈ ಕಾರ್ಯಕ್ರಮಕ್ಕೆ ಅಧ್ಯಕ್ಷರಾಗಿ ಜಿಲ್ಲಾಧಿಕಾರಿ, ಕೃಷಿ ವಿಜ್ಞಾನ ಕೇಂದ್ರದ ಅಧಿಕಾರಿ ಅನುಷ್ಠಾನಾಧಿಕಾರಿಯಾಗಿ, ಜಂಟಿ ಕೃಷಿ ನಿರ್ದೇಶಕರು ಮೇಲ್ವಿಚಾರಣೆ ಮಾಡಲಿದ್ದಾರೆ.
- ತೆಲ್ಲೂರ ಗ್ರಾಮದ ಪ್ರತಿ ರೈತನ ಅಂಕಿ ಅಂಶಗಳನ್ನು ಒಳಗೊಂಡ ಪ್ರತ್ಯೇಕ ಕಡತ ತಯಾರಿಸಲಾಗುವುದು.
- ಡಿಸೆಂಬರ್‌ನೊಳಗೆ ಎಲ್ಲ ಇಲಾಖೆಗಳು ತಮ್ಮ ಪಾಲಿನ ಪೂರ್ವ ಸಿದ್ಧತೆ ಪೂರ್ಣಗೊಳಿಸಬೇಕು.

### ಹೈನುಗಾರಿಕೆಗೆ ಸಂಪೂರ್ಣ ಬೆಂಬಲ

ತೆಲ್ಲೂರ ರೈತರು ಹೈನುಗಾರಿಕೆ ಕೈಗೊಳ್ಳಲು ಪ್ರಾಯೋಗಿಕವಾಗಿ ಪಶು ಸಂಗೋಪನಾ ಇಲಾಖೆಯಿಂದ ಒಂದು ರೈತ ಕುಟುಂಬಕ್ಕೆ ಎರಡು ಎಮ್ಮೆ ಅಥವಾ ಎರಡು ಆಕಳು ನೀಡುವ ಯೋಜನೆಯಿದೆ. ಇದರ ಜೊತೆಗೆ, ಕುರಿ ಸಾಕಾಣಿಕೆಯಲ್ಲಿ ಆಸಕ್ತ ಇರುವವರಿಗೆ 10 ಕುರಿಗಳ ಜೊತೆಗೆ ಒಂದು ಹೋತ ನೀಡಲಾಗುವುದು. ಕೋಳಿ ಸಾಕಾಣಿಕೆಗೂ ಅಗತ್ಯ ನೆರವು ನೀಡಲಾಗುವುದು. ಈ ಎಲ್ಲ ಸವಲತ್ತುಗಳು ತೆಲ್ಲೂರ ಗ್ರಾಮದ ರೈತರಿಗೆ ಒದಗಿಸಲು ಅಗತ್ಯ ಕಾರ್ಯ ಯೋಜನೆ ರೂಪಿಸಲಾಗುವುದು ಎಂದು ಇಲಾಖೆಯ ಜಿಲ್ಲಾ ಮುಖ್ಯ ಅಧಿಕಾರಿ ಡಾ.ರಾಥೋಡ್ ತಿಳಿಸಿದರು.

ಸಭೆಯಲ್ಲಿ ಲೀಡ್ ಬ್ಯಾಂಕ್ ಪ್ರತಿನಿಧಿಯಾಗಿ ಉನ್ನತ ಅಧಿಕಾರಿಯೊಬ್ಬರ ಬದಲು ಕಚೇರಿಯ ಸಿಬ್ಬಂದಿ ಆಗಮಿಸಿರುವುದನ್ನು ಗಮನಿಸಿ ಕೃಷಿ ಬೆಲೆ ಆಯೋಗದ ಅಧ್ಯಕ್ಷ ಪ್ರಕಾಶ್ ಕಮ್ಮರಡ್ಡಿ ಬೇಸರ ವ್ಯಕ್ತಪಡಿಸಿದರು. ಆದರೂ ಬ್ಯಾಂಕಿನ ಅದೇ ಸಿಬ್ಬಂದಿಗೆ ನಿರ್ದೇಶನ ನೀಡಿದ ಅವರು, ತೆಲ್ಲೂರಿನ ಎಲ್ಲ ರೈತರ ಸಾಲದ ಸಮೀಕ್ಷೆ ಕೈಗೊಳ್ಳಬೇಕು, ಸಾಲದ ಯೋಜನೆ ಸಿದ್ಧಪಡಿಸಬೇಕು. ನಬಾರ್ಡ್ ಮೂಲಕ ಲಭ್ಯವಿರುವ ಯೋಜನೆಗಳ ಕುರಿತು ರೈತರಿಗೆ ಅಗತ್ಯ ಮಾಹಿತಿ ನೀಡಬೇಕು. ಇದಕ್ಕಾಗಿ ಗ್ರಾಮದಲ್ಲಿ ಶಿಬಿರ ನಡೆಸಬೇಕು. ಈ ನಿಟ್ಟಿನಲ್ಲಿ ಬ್ಯಾಂಕ್ ಉನ್ನತ ಅಧಿಕಾರಿಗಳಿಗೆ ಮಾಹಿತಿ ತಲುಪಿಸಬೇಕೆಂದು ನಿರ್ದೇಶನ ನೀಡಿದರು.

### ಪ್ರತಿ ಸೋಮವಾರ ಅಧಿಕಾರಿಗಳ ಸಭೆ

ಕೃಷಿ, ನೀರಾವರಿ, ತೋಟಗಾರಿಕೆ, ಸಾಮಾಜಿಕ ಅರಣ್ಯ, ಲೀಡ್ ಬ್ಯಾಂಕ್, ರೇಷ್ಮೆ ಇಲಾಖೆ, ಆರೋಗ್ಯ ಇಲಾಖೆ, ಕೃಷಿ ವಿಜ್ಞಾನ ಕೇಂದ್ರ, ಕೃಷಿ ವಿಜ್ಞಾನಿಗಳು ಇನ್ನು ಮುಂದೆ ಪ್ರತಿ ಸೋಮವಾರ ತೆಲ್ಲೂರ ಗ್ರಾಮದಲ್ಲಿ ರೈತರ ಸಭೆ ನಡೆಸಬೇಕು ಎಂದು ಕೃಷಿ ಬೆಲೆ ಆಯೋಗದ ಅಧ್ಯಕ್ಷ ಪ್ರಕಾಶ್ ಕಮ್ಮರಡ್ಡಿ ನಿರ್ದೇಶನ ನೀಡಿದರು.

### ತುರ್ತು ಉಗ್ರಾಣ ನಿರ್ಮಾಣಕ್ಕೆ ಒತ್ತು

ತೆಲ್ಲೂರಿನಲ್ಲಿ 112 ಕೃಷಿ ಕುಟುಂಬಗಳಿವೆ. ಈ ರೈತರು ತಮ್ಮ ಉತ್ಪನ್ನಗಳನ್ನು ಸುರಕ್ಷಿತವಾಗಿಟ್ಟು, ಅಲ್ಲಿ ಪಡೆಯುವ ರಸೀದಿ ಆಧಾರದ ಮೇಲೆ ಅಡಮಾನ ಸಾಲ ಪಡೆಯಲು ತುರ್ತಾಗಿಯೇ ಕೆಲಸ ಆರಂಭಿಸಬೇಕೆಂದು ಕಮ್ಮರಡ್ಡಿ ಜಿಲ್ಲಾ ಮಟ್ಟದ ಅಧಿಕಾರಿಗಳಿಗೆ ತಾಕೀತು ಮಾಡಿದರು. ಮೇಲಾಗಿ, ಕೃಷಿ ಇಲಾಖೆಯಿಂದ ಲಭ್ಯವಿರುವ ಎಲ್ಲ ಸವಲತ್ತುಗಳ ಪಟ್ಟಿ ಸಿದ್ಧಪಡಿಸಿ ತೆಲ್ಲೂರ ಗ್ರಾಮದಲ್ಲಿ ಮುಂದಿನ ತಿಂಗಳ ಅಂತ್ಯದೊಳಗೆ ಪ್ರಚಾರ ಕಾರ್ಯ ಕೈಗೊಳ್ಳಬೇಕೆಂದು ಸೂಚಿಸಿದರು.

### ಶೇ.100ರಷ್ಟು ಕೃಷಿ ಹೊಂಡ ನಿರ್ಮಾಣ

ತೆಲ್ಲೂರ ಗ್ರಾಮದ ರೈತರು ಮೀನುಗಾರಿಕೆ ಕೈಗೊಳ್ಳಲು ಸಿದ್ಧರಿದ್ದರೆ ಅವರಿಗಾಗಿ ಶೇ.100ರಷ್ಟು ಕೃಷಿ ಹೊಂಡಗಳನ್ನು ನಿರ್ಮಿಸಿಕೊಡಲು ಸಿದ್ಧವಿದೆ ಎಂದು ಕೃಷಿ ಇಲಾಖೆಯ ಜಂಟಿ ನಿರ್ದೇಶಕ ಜಿಲಾನಿ ಮೊಕಾಶಿ ಹೇಳಿದರು. ಇದಕ್ಕೂ ಮುನ್ನ ಸಭೆಯಲ್ಲಿದ್ದ ಮೀನುಗಾರಿಕೆ ಇಲಾಖೆಯ ಅಧಿಕಾರಿ ಮಾತನಾಡಿ, ಮೀನು ಕೃಷಿ ಹೊಂಡದ ಮೂಲಕವೂ ಉತ್ತಮ ಆದಾಯ ಗಳಿಸಲು ಸಾಧ್ಯವಿದೆ ಎಂದು ಹೇಳಿದಾಗ, ಇದಕ್ಕೆ ಪ್ರತಿಕ್ರಿಯಿಸಿ ಮೊಕಾಶಿ ಈ ಆಶ್ವಾಸನೆ ನೀಡಿದಾಗ ಸಭೆಯಲ್ಲಿದ್ದ ತೆಲ್ಲೂರ ಗ್ರಾಮದ 25 ಪ್ರತಿನಿಧಿಗಳು ಸಂತಸದಿಂದ ಚಪ್ಪಾಳೆ ತಟ್ಟಿದರು.